ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಲಯ ಯಾದಗಿರಿ.

ಸಿಸಿ ನಂ. **269/2020**

| | | |
|---|---|---|
| ಸಾಕ್ಷಿಯ ಹೆಸರುಃ | ಗೌತಮ | ಪ್ರಾಸಾಃ 3 |
| ತಂದೆ/ಗಂಡನ ಹೆಸರುಃ | ಮರಿಯಪ್ಪ | ಚಾಸಾಃ 4 |
| ವಯಸ್ಸು ಃ | 53 ವರ್ಷ | ದಿಃ 04-07-2025 |
| ಉದ್ಯೋಗಃ | ಎ. ಎಸ್. ಐ. | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ಸೈದಾಪೂರ . | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ

ನಾನು 2015 ರಿಂದ ಇಲ್ಲಿಯವರೆಗೆ ಸೈದಾಪೂರ ಪೋಲಿಸ ಠಾಣೆಯಲ್ಲಿ ನಾನು ಈ ಘಟನೆಯಾದಾಗ ಮುಖ್ಯ ಪೇದೆ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

ದಿನಾಂಕ 17-12-2019 ರಂದು ಮುಂಜಾನೆ 9.00 ಗಂಟೆಗೆ ಗಸ್ತಿಗೆ ಹೋಗುವಾಗ ಚಾಸಾಃ 1 ಮತ್ತು ನಾನು, ಚಾಸಾಃ 5 ರವರು ಆಂಜನೆಯ ಗುಡಿಯ ಹತ್ತಿರ ಮರೆಯಾಗಿ ನಿಂತಿರುವಾಗ ಕಿರಾಣಿ ಅಂಗಡಿಯಲ್ಲಿ ಆರೋಪಿತನು ಮದ್ಯ ಮಾರಾಟ ಮಾಡುತ್ತಿದ್ದನು. ಸದರಿ ವಾಹನ ನಂಬರ ಕೆಎ-33-ಜಿ-0095 ನೇದ್ದರಲ್ಲಿ ಪಂಚರು ಮತ್ತು ಉಳಿದ ಸಿಬ್ಬಂದಿಗಳ ಜೊತೆಗೆ 3.15 ಗಂಟೆಗೆ ತುರಕನದೊಡ್ಡಿಗೆ ಹೋಗಿರುತ್ತೇವೆ. ಆಂಜನೇಯ ಗುಡಿಯ ಹತ್ತಿರ ವಾಹನವನ್ನು ನಿಲ್ಲಿಸಿರುತ್ತೇವೆ. ಆರೋಪಿತನು ದಾಳಿ ಮಾಡಿದಾಗ ಓಡಿ ಹೋಗಿರುತ್ತಾನೆ. ಆರೋಪಿತನ ಹೆಸರು ಸಿದ್ದಲಿಂಗ ತಂದೆ ಆಶಪ್ಪ ಎಂದು ತಿಳಿದುಬಂದಿರುತ್ತದೆ.

1. 650 ಎಮ್. ಎಲ್ ನ ಕಿಂಗ್ ಫೀಶರ 5 ಬಾಟಲಗಳು.
2. 350 ಎಮ್. ಎಲ್ ನ ಕಿಂಗ ಫೀಶರ ಸ್ಟ್ರಾಂಗ್ 15 ಬಾಟಲಿಗಳು.
3. 180 ಎಮ್, ಎಲ್ ನ 4 ಟೆಟ್ರಾ ಪಾಕೆಟಗಳು.
4. 180 ಎಮ್, ಎಲ್ ನ 9 ಟೆಟ್ರಾ ಪಾಕೆಗಳು.
5. 180 ಎಮ್, ಎಲ್ ನ 4 ಇಂಪಿರಿಯಲ್ 4 ಬಾಟಲಿಗಳು.
6. ನಗದು ಹಣ 200/- ರೂ. ಸಿಕ್ಕಿರುತ್ತವೆ.

ಸದರಿ ಎಲ್ಲಾ ಬಾಟಲಿಗಳು ಬಿಳಿ ಬಣ್ಣದ ಚಿಲದಲ್ಲಿರುತ್ತವೆ. ಪಂಚರ ಸಮಕ್ಷಮದಲ್ಲಿ ಪಂಚನಾಮೆಯನ್ನು ಎಫ್ ಎಸ್. ಎಲ್ ವರದಿಗಾಗಿ ಕಳುಹಿಸಿರುತ್ತೇವೆ. ಮದ್ಯಾಹ್ನ 3.30 ರಿಂದ 4.30

ರವರೆಗೆ ಪಂಚನಾಮೆಯನ್ನು ಜರುಗಿಸಿರುತ್ತೇವೆ. ಆರೋಪಿತನು ಅಕ್ರಮವಾಗಿ ಮದ್ಯ ಮಾರಾಟ ಮಾಡುವುದು ಕಂಡುಬರುತ್ತದೆ.

ಮು. ಮಾ. **1** ರಿಂದ **5** ನ್ಯಾಯಾಲಯದ ಮುಂದೆ ಲಭ್ಯವಿಲ್ಲದೆ ಇರುವುದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ